Crl Mis– 86/2022

ಆರ್ . ಡಬ್ಲೂ – 1

ಸಾಕ್ಷಿಯನ್ನು ದಿಃ 16.06.2026 ರಂದು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲುಃ ಅರ್ಜಿದಾರರ ಪರ ಶ್ರೀ.ಎಂ.ಎಸ್.ಜಿ ವಕೀಲರಿಂದ –**

**1.** 1 ನೇ ಅರ್ಜಿದಾರಳು ಮಾನಸಿಕ ಆರೋಗ್ಯದ ಸಮಸ್ಯೆಯಿಂದ ಬಳಲುತ್ತಿದ್ದಾಳೆ ಎಂದು 2022 ರ ಸೆಪ್ಟೆಂಬರ್ ನಲ್ಲಿ ಅವಳು ಚಿಕಿತ್ಸೆ ಪಡೆಯುತ್ತಿರುವ ಬಗ್ಗೆ ದಾಖಲೆಗಳು ನನಗೆ ಸಿಕ್ಕಾಗ ನನಗೆ ಗೊತ್ತಾಯಿತು. ನಿಡಿ–1 ರಲ್ಲಿ physiopedia ಎಂಬ ಶಬ್ಧವನ್ನು ಉಲ್ಲೇಖ ಮಾಡಿಲ್ಲ. ನಿಡಿ–1 ರಲ್ಲಿ 1 ನೇ ಅರ್ಜಿದಾರಳ ಹೆಸರು ಬರೆದಿದ್ದು, ದಿನಾಂಕ 08.07.2010 ರಂದು ಆಸ್ಪತ್ರೆಗೆ ದಾಖಲಾಗಿರುವ ಬಗ್ಗೆ ಉಲ್ಲೇಖವಿದೆ ಎಂದರೆ ಸರಿ. ನಿಡಿ–1 ರಂತೆ 1 ನೇ ಅರ್ಜಿದಾರಳು ಕೊನೆಯದಾಗಿ ವೈದ್ಯರನ್ನು ಭೇಟಿ ಮಾಡಿದ ದಿನಾಂಕ 24.01.2012 ಎಂದರೆ ಸರಿ. ನನ್ನ ಮತ್ತು 1 ನೇ ಅರ್ಜಿದಾರಳ ವಿವಾಹವು ಹಿರಿಯರು ಒಪ್ಪಿ ಮಾಡಿದಂತಹ ವಿವಾಹ. ವಿವಾಹ ಪೂರ್ವದಲ್ಲಿ ನನ್ನ ಮತ್ತು 1 ನೇ ಅರ್ಜಿದಾರಳ ಜಾತಕ ಹೊಂದಾಣಿಕೆಯಾಗುತ್ತದೆಯೇ ಎಂದು ನೋಡಿದ್ದೇವೆ. ಆಗ ಜ್ಯೋತಿಷಿಗಳು 1 ನೇ ಅರ್ಜಿದಾರಳ ಮಾನಸಿಕ ಆರೋಗ್ಯ ಸರಿಯಾಗಿ ಇರಲಿಲ್ಲ ಎಂದು ಹೇಳಲಿಲ್ಲ.

**2.** 2 ನೇ ಅರ್ಜಿದಾರರನ್ನು ನಾನು ಕೊನೆಯದಾಗಿ 2025 ನೇ ಸಾಲಿನಲ್ಲಿ ನೋಡಿದ್ದೇನೆ. 2 ನೇ ಅರ್ಜಿದಾರರು ಈಗ ಆರೋಗ್ಯವಾಗಿ ಇಲ್ಲ. 2 ನೇ ಅರ್ಜಿದಾರರು ಈಗ ಶಾಲೆಗೆ ಹೋಗುತ್ತಿರುವ ಬಗ್ಗೆ ನನಗೆ ಮಾಹಿತಿ ಇಲ್ಲ. 2 ನೇ ಅರ್ಜಿದಾರಳಿಗೆ ಏನು ಕಾಯಿಲೆ ಇದೆ ಎಂದು ನಾನು ಮಾಹಿತಿಯನ್ನು ಪಡೆದಿಲ್ಲ. ಮುಂದುವರೆದು 2 ನೇ ಅರ್ಜಿದಾರಳಿಗೆ ಏನು ಔಷಧಿ ಕೊಡುತ್ತಿದ್ದಾರೆ ಎಂದು ನನಗೆ ಗೊತ್ತಿಲ್ಲ ಎನ್ನುತ್ತಾರೆ.

**3.** ದಿನಾಂಕ 19.09.2022 ರಂದು 1 ನೇ ಅರ್ಜಿದಾರಳಿಗೆ ನಾನು ಮತ್ತು ನನ್ನ ತಂದೆ ಸೇರಿ ಹೊಡೆದು ರಕ್ತ ಗಾಯವನ್ನು ಮಾಡಿದ್ದೆವು ಎಂದರೆ ಸರಿಯಲ್ಲ. ನನ್ನ ಬಳಿ ಈಗ ಕಾರು ಇಲ್ಲ. ನಾನು ಎಲೆಕ್ಟ್ರಾನಿಕ್ ವಸ್ತುಗಳ ಹೋಲ್ ಸೇಲ್ ಮಾರಾಟಗಾರ ಎಂದರೆ ಸರಿಯಲ್ಲ. ಮುಂದುವರೆದು ಬಾಡಿಗೆಗೆ ಜಾಗ ಪಡೆದು ನಾನು ಕಂಪ್ಯೂಟರ್ ಗಳ ಮಾರಾಟ ಮತ್ತು ರಿಪೇರಿ ಕೆಲಸ ಮಾಡುತ್ತಿದ್ದೇನೆ. ನಾನು ದ್ವಿತೀಯ ಪಿಯುಸಿವರೆಗೆ ಓದಿದ್ದೇನೆ. ನಾವು ವಾಸವಾಗಿರುವ ಮನೆ ನಮ್ಮ ಸ್ವಂತದ್ದು ಎಂದರೆ, ಸಾಕ್ಷಿಯು ನನ್ನ ತಾಯಿಯ ಹೆಸರಿಗೆ ಇದೆ ಎನ್ನುತ್ತಾರೆ. ಈಗ ನಾವು ವಾಸವಾಗಿರುವ ಮನೆಯನ್ನು 2020 ರಲ್ಲಿ ನನ್ನ ತಾಯಿ ಕಟ್ಟಿಸಿದ್ದಾರೆ. ನನ್ನ ತಾಯಿಯ ತವರು ಮನೆ ಮಂಗಳೂರಿನ ಉಪ್ಪಿನಂಗಡಿ.ನನ್ನ ತಾಯಿ ಅಂಚೆ ಇಲಾಖೆಯಲ್ಲಿ ಆರ್.ಡಿ ಕಲೆಕ್ಟರ್ ಆಗಿ ಕೆಲಸ ಮಾಡುತ್ತಿದ್ದಾರೆ. ನನ್ನ ತಂದೆಗೆ ಮೊದಲು ಜಮೀನು ಇತ್ತು ಎಂದರೆ ಸರಿ. ಅದು ನನ್ನ ಪಿತ್ರಾರ್ಜಿತ ಸ್ವತ್ತು ಎಂದರೆ ಸರಿಯಲ್ಲ. ಮುಂದುವರೆದು ಅದು ನನ್ನ ತಂದೆಯ ಸ್ವಯಾರ್ಜಿತ ಸ್ವತ್ತು ಎನ್ನುತ್ತಾರೆ. ಆ ಮನೆಯನ್ನು ಈಗ ಮಾರಾಟ ಮಾಡಿದ್ದಾರೆ ಎಂದರೆ ಸರಿ. ಆ ಹಣದಿಂದಲೇ ನಾವು ಈಗ ವಾಸವಾಗಿರುವ ಮನೆಯನ್ನು ಕಟ್ಟಿಸಿದ್ದಾರೆ ಎನ್ನುವುದು ಸರಿಯಲ್ಲ.

**4.** ನಾನು ಕಂಪ್ಯೂಟರ್ ಗಳನ್ನು ಮಾರಾಟ ಮಾಡುವ ವ್ಯವಹಾರ ಪ್ರಾರಂಭಿಸಿದಾಗ ನನ್ನ ತಂದೆ 50 ಲಕ್ಷ ರೂ.ಗಳನ್ನು ನನಗೆ ಬಂಡವಾಳವಾಗಿ ಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಕಂಪ್ಯೂಟರ್ ಸೇಲ್ಸ್ ಮತ್ತು ರಿಪೇರಿಯಿಂದ ವಾರ್ಷಿಕವಾಗಿ ನನಗೆ ಖರ್ಚನ್ನು ಕಳೆದು 15 ಲಕ್ಷ ರೂ.ಗಳ ಆದಾಯ ಇದೆ ಎನ್ನುವುದು ಸರಿಯಲ್ಲ. ನಮ್ಮ ಕುಟುಂಬಕ್ಕೆ ಒಟ್ಟು 3 ಎಕರೆ ಅಡಿಕೆ ತೋಟ ಇದೆ ಎಂದರೆ ಸರಿಯಲ್ಲ. ಮುಂದುವರೆದು ನನ್ನ ತಾಯಿಯ ಹೆಸರಿಗೆ ಸುಮಾರು ಒಂದುವರೆ ಎಕರೆ ತೋಟ ಇದೆ ಎನ್ನುತ್ತಾರೆ. ಆ ಅಡಿಕೆ ತೋಟ ನನ್ನ ಅಜ್ಜನಿಂದ ನನ್ನ ತಂದೆಗೆ ಬಂದಿದೆ ಎನ್ನುವುದು ಸರಿಯಲ್ಲ. ನನ್ನ ತಂದೆ ಸದರಿ ಅಡಿಕೆ ತೋಟವನ್ನು ನನ್ನ ತಾಯಿಗೆ ದಾನಪತ್ರದ ಮೂಲಕ ನೀಡಿದ್ದಾರೆ ಎನ್ನುವುದು ಸರಿಯಲ್ಲ. ನನ್ನ

ತಾಯಿಯ ತವರು ಮನೆಯವರು ಬಹಳ ಬಡವರು ಆಗಿದ್ದು, ಅವರಿಗೆ ಯಾವುದೇ ಆದಾಯ ಇಲ್ಲ ಎಂದರೆ ನನಗೆ ಗೊತ್ತಿಲ್ಲ. ನನ್ನ ತಾಯಿ ಗೃಹಿಣಿಯಾಗಿದ್ದು, ಅಂಚೆ ಇಲಾಖೆಯಲ್ಲಿ ಆರ್.ಡಿ ಏಜೆಂಟ್ ಅಲ್ಲ ಎಂದರೆ ಸರಿಯಲ್ಲ.

**5.** 2 ನೇ ಅರ್ಜಿದಾರಳಿಗೆ 1 ವರ್ಷ ಇದ್ದಾಗ 1 ನೇ ಅರ್ಜಿದಾರಳು ನಮ್ಮ ಮನೆಯಿಂದ ಸಾಗರಕ್ಕೆ ಬಂದಿದ್ದಾಳೆ. 1 ನೇ ಅರ್ಜಿದಾರಳೊಂದಿಗೆ ನನ್ನ ಮದುವೆಯಾದ ದಿನದಿಂದ 2 ನೇ ಅರ್ಜಿದಾರಳಿಗೆ 1 ವರ್ಷ ಆಗುವವರೆಗೆ 1 ನೇ ಅರ್ಜಿದಾರಳಿಗೆ ನಾನು ಫಾಲೋ ಅಪ್ ಟ್ರೀಟ್ ಮೆಂಟ್ ಅನ್ನು ಕೊಡಿಸಿಲ್ಲ. ಏಕೆಂದರೆ ಅವಳು ಚಿಕಿತ್ಸೆಗೆ ಬರುವುದಿಲ್ಲ ಎಂದು ಹೇಳಿದಳು. ಈ ವಿಷಯವನ್ನು 1 ನೇ ಅರ್ಜಿದಾರಳ ತಂದೆ ತಾಯಿಗೆ ನಾವು ಹೇಳಿದ್ದೇವೆ. ನನ್ನ ಅಭಿಪ್ರಾಯದಲ್ಲಿ ನನ್ನ ಅತ್ತೆ ಮಾವ ಒಳ್ಳೆಯವರೋ ಅಥವಾ ಕೆಟ್ಟವರೋ ಎಂದು ನನಗೆ ಗೊತ್ತಿಲ್ಲ. ನನ್ನ ಅತ್ತೆ ಮಾವ ಒಳ್ಳೆಯವರೋ ಅಥವಾ ಕೆಟ್ಟವರೋ ಎಂದು ನಾನು ವಿಚಾರಣೆ ಮಾಡಿಲ್ಲ. ಅವರು ನನಗೆ ಮೋಸ ಮಾಡಿದ್ದಾರೆ ಎಂದು ನನಗೆ ಗೊತ್ತಾಯಿತು. ಅವರು ಮೋಸ ಮಾಡಿದ್ದಾರೆ ಎಂದು ನನ್ನ ಅತ್ತೆ ಮಾವನ ವಿರುದ್ಧ ನಾನು ಯಾವುದೇ ಕಾನೂನಿನ ಕ್ರಮ ಕೈಗೊಂಡಿಲ್ಲ. ಮೋಸದಿಂದ 1 ನೇ ಅರ್ಜಿದಾರಳೊಂದಿಗೆ ನನ್ನ ಮದುವೆ ಮಾಡಿಸಿದ್ದಾರೆ ಎಂದು ನನಗೆ ತಿಳಿದ ನಂತರ ಸದರಿ ವಿವಾಹವನ್ನು ಶೂನ್ಯ ಮಾಡುವಂತೆ ನಾನು ಅರ್ಜಿಯನ್ನು ಸಲ್ಲಿಸಿಲ್ಲ. ಏಕೆಂದರೆ 2 ನೇ ಅರ್ಜಿದಾರಳು ಜನಿಸಿದ್ದಳು. ಮೋಸದಿಂದ ವಿವಾಹ ಮಾಡಿಸಿದರೆ ಸದರಿ ವಿವಾಹವನ್ನು ರದ್ದುಗೊಳಿಸಿ ಪರಿಹಾರ ಪಡೆಯಲು ಇರುವ ಕಾನೂನಿನ ಬಗ್ಗೆ ನಾನು ವಿಚಾರಣೆ ಮಾಡಿಲ್ಲ. 2 ನೇ ಅರ್ಜಿದಾರಳ ಜನ್ಮ ದಿನಾಂಕ ಈಗ ನನಗೆ ನೆನಪಿಲ್ಲ.

**6.** ದಿನಾಂಕ 29.04.2018 ರಂದು ನನ್ನ ಮದುವೆ 1 ನೇ ಅರ್ಜಿದಾರಳೊಂದಿಗೆ ಬಂಟ್ವಾಳ ತಾಲ್ಲೂಕಿನ ಮಾಣಿಮಠದಲ್ಲಿ ನಡೆಯಿತು ಎಂದರೆ ಸರಿ. ಮದುವೆಯಾದ ಮೂರುವರೆ ವರ್ಷದ ನಂತರ 2 ನೇ ಅರ್ಜಿದಾರಳು ಜನಿಸಿದ್ದಾಳೆ. .

**ಪ್ರಶ್ನೆಃ** ಮಾನಸಿಕ ರೋಗಿಗೆ ಆಕಸ್ಮಿಕವಾಗಿ ಮದುವೆಯಾಗಿ ಗರ್ಭಧಾರಣೆಯಾದರೆ ಮುಂದೆ ಅವಳ ಆರೋಗ್ಯದ ಮೇಲೆ ಪರಿಣಾಮ ಬೀರುತ್ತದೆ ಎಂಬ ಕಲ್ಪನೆ ನಿಮಗೆ ಇತ್ತೆ?

**ಉತ್ತರಃ** 1 ನೇ ಅರ್ಜಿದಾರಳ ವರ್ತನೆ ಸರಿ ಇರಲಿಲ್ಲ ಎಂದು ನಾನು ಹೇಳಿದ್ದು, ಅವಳು ಮಾನಸಿಕ ರೋಗಿ ಎಂದು ನನಗೆ ತಿಳಿದಿರಲಿಲ್ಲ, ಆದ್ದರಿಂದ ಈ ಬಗ್ಗೆ ನಾನು ಕಲ್ಪನೆ ಮಾಡಿರಲಿಲ್ಲ ಎಂದು ನುಡಿಯುತ್ತಾರೆ.

**7.** ಮದುವೆಯಾದ ಮರುದಿನವೇ 1 ನೇ ಅರ್ಜಿದಾರಳ ವರ್ತನೆ ಸರಿಯಾಗಿ ಇರಲಿಲ್ಲ ಎಂದು ನನಗೆ ತಿಳಿದ ನಂತರ ಚಿಕಿತ್ಸೆಗೆ ಕರೆದಾಗ ಅವಳು ಬರಲಿಲ್ಲ. 1 ನೇ ಅರ್ಜಿದಾರಳ ವರ್ತನೆಯಲ್ಲಿ ಬದಲಾವಣೆ ಕಂಡು ಬಂದ ಕೂಡಲೇ ಅವಳ ವಿರುದ್ಧ ನಾವು ಯಾವುದೇ ಕ್ರಮ ಜರುಗಿಸಿಲ್ಲ. ಮುಂದುವರೆದು 1 ನೇ ಅರ್ಜಿದಾರಳು ಮನೆ ಬಿಟ್ಟು ಹೋಗುವುದು, ಸುಳ್ಳು ವರದಕ್ಷಿಣೆ ಕೇಸು ಹಾಕಿ ನಿಮ್ಮನ್ನು ಜೈಲಿಗೆ ಹಾಕುತ್ತೇನೆ ಎಂದು ಬೆದರಿಕೆ ಹಾಕಿದಾಗ ಪುತ್ತೂರಿ ಪೋಲಿಸ್ ಠಾಣೆಗೆ ನನ್ನ ತಾಯಿ ದೂರನ್ನು ನೀಡಿದ್ದರು. ಆಗ ಅಸಂಜ್ಞೆಯ ಪ್ರಕರಣ ದಾಖಲಿಸಿಕೊಂಡು 1 ನೇ ಅರ್ಜಿದಾರಳನ್ನು ಕರೆಯಿಸಿ ತಿಳುವಳಿಕೆ ಹೇಳಿ ಪ್ರಕರಣವನ್ನು ಮುಕ್ತಾಯ ಮಾಡಿದರು.

**8.** 2021 ರಲ್ಲಿ ಪುತ್ತೂರಿನ ಸಿಟಿ ಆಸ್ಪತ್ರೆಯಲ್ಲಿ ನನ್ನ ಜನನಾಂಗಕ್ಕೆ ಶಸ್ತ್ರ ಚಿಕಿತ್ಸೆ ಆಗಿರುತ್ತದೆ. ಆ ಶಸ್ತ್ರ ಚಿಕಿತ್ಸೆಯಾದ ನಂತರ 1 ನೇ ಅರ್ಜಿದಾರಳು ಗರ್ಭಿಣಿಯಾದಳು ಎಂದರೆ ಸರಿ. ಶಸ್ತ್ರ ಚಿಕಿತ್ಸೆಯಾಗುವವರೆಗೆ ನನಗೆ ಲೈಂಗೀಕ ಕ್ರಿಯೆಯಲ್ಲಿ ಆಸಕ್ತಿ ಇರಲಿಲ್ಲ ಎಂದರೆ ಸರಿಯಲ್ಲ. ಇದು ನನ್ನ ಜನ್ಮತಹಃ ಬಂದಂತಹ ನ್ಯೂನತೆಯಾಗಿದ್ದರೂ ಸಹ ಅದನ್ನು ಮರೆ ಮಾಚಿ ನನ್ನ ತಂದೆ 1 ನೇ ಅರ್ಜಿದಾರಳೊಂದಿಗೆ ನನ್ನ ಮದುವೆ ಮಾಡಿಸಿದ್ದರು ಎಂದರೆ, ಸಾಕ್ಷಿಯು ಅದು ನ್ಯೂನತೆ ಅಲ್ಲ ಮತ್ತು ಅದರ ಬಗ್ಗೆ ನನಗೆ ತಿಳಿದಿರಲಿಲ್ಲ ಎಂದು ನುಡಿಯುತ್ತಾರೆ. ಸದರಿ ಶಸ್ತ್ರ ಚಿಕಿತ್ಸೆಯ ನಂತರವು ಸಹ ನಾನು ನನ್ನ ನ್ಯೂನತೆಯಿಂದ ಸಂಪೂರ್ಣವಾಗಿ ಗುಣಮುಖನಾಗಿಲ್ಲ ಎಂದರೆ ಸರಿಯಲ್ಲ. ಈ ಕಾರಣದಿಂದಲೇ ನನ್ನ ಮತ್ತು 1 ನೇ ಅರ್ಜಿದಾರಳ ನಡುವೆ ಮನಸ್ತಾಪ ಉಂಟಾಯಿತು ಎಂದರೆ ಸರಿಯಲ್ಲ. ಆದರೂ ಸಹ ಹೊರ ಜಗತ್ತಿಗೆ ನನ್ನ ನ್ಯೂನತೆ ಗೊತ್ತಾಗಬಾರದು ಎಂದು 1 ನೇ ಅರ್ಜಿದಾರಳ ಮಾನಸಿಕ ಆರೋಗ್ಯ ಸರಿಯಾಗಿ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತೀ ಮುದ್ದತ್ತಿನ ದಿನಾಂಕದಂದು ನಾನು ಸಾಗರಕ್ಕೆ ಬಂದು ಪುನಃ ವಾಪಸ್ಸು ಹೋಗಲು ಸುಮಾರು 5-6 ವರ್ಷ ಖರ್ಚಾಗುತ್ತದೆ ಎಂದರೆ ಸರಿ.

**ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಲಾಯಿತು.**

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಿಸಲಾಯ್ತು)

ಓದಿ ಹೇಳಿ ಕೇಳಿ ಸರಿ ಇದೆ

ಪ್ರಧಾನ ವ್ಯವಹಾರ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಸಾಗರ.